# ಮಂಗಲಜೋಡಿಯಲ್ಲಿ ಹಾವಿಗಾಗಿ ಜುಗಲ್‌ಬಂದಿ

ಒಡಿಶಾದ ಮಂಗಲಜೋಡಿಯ ಪಕ್ಷಿಧಾಮ ರೂಪುಗೊಳ್ಳುವುದರ ಹಿಂದೆ ಪರಿಸರಪ್ರಿಯರ ಕಾಳಜಿಯಿದೆ. ಪಕ್ಷಿಗಳ ಬೇಟೆಗಾರರು ಪಕ್ಷಿಪ್ರೇಮಿಗಳಾದುದರ ಪರಿಣಾಮ ಈ ಪಕ್ಷಿಧಾಮ. ಪ್ರತಿ ವರ್ಷ ಇಲ್ಲಿ ಪಕ್ಷಿಗಳ ರಾಷ್ಟ್ರೀಯ ಹಬ್ಬ ನಡೆಯುತ್ತದೆ.

■ ಡಿ.ಜಿ. ಮಲ್ಲಿಕಾರ್ಜುನ



1



2

ಪುಟ್ಟ ದೋಣಿಯಲ್ಲಿ ಶಬ್ದ ಮಾಡದೇ ನಿಧಾನವಾಗಿ ಹೋಗುತ್ತಿದ್ದೆವು. ದೂರದಲ್ಲಿ ಕಪ್ಪು ಬಣ್ಣದ ಬಾಕುವಿನಂತಿರುವ ಉದ್ದನೆಯ ಕೊಕ್ಕಿನ ಐಬಿಸ್ ಹಕ್ಕಿ ಹುಲ್ಲು ಮತ್ತು ಜೊಂಡಿನ ಮೇಲೆ ಕಾಣಿಸಿತು. ಜೊಂಡಿನ ಕೆಳಗಿನ ನೀರಿನವರೆಗೂ ತನ್ನ ಕೊಕ್ಕನ್ನು ತಿವಿದು ತಿವಿದು ಅಮೂಲ್ಯ ವಸ್ತುವಿನ ಹುಡುಕಾಟವನ್ನು ಅದು ನಡೆಸಿತ್ತು. ದೋಣಿಯನ್ನು ಹುಟ್ಟು ಹಾಕುತ್ತಿದ್ದ ಗಣೇಶ್ ಇದ್ದಕ್ಕಿದ್ದಂತೆ, 'ಹಿಡೀತು' ಎಂದ. ಐಬಿಸ್ ಹಕ್ಕಿ ಹುಲ್ಲಿನ ನಡುವಿನಿಂದ ಏನನ್ನೋ ಎಳೆಯುತ್ತಿದೆ. ನೋಡುತ್ತಿದ್ದಂತೆಯೇ ಅದು ಸ್ವಲ್ಪ ದೊಡ್ಡದಾಗಿದ್ದ ನೀರುಹಾವನ್ನು ಹೊರಗೆ ಎಳೆಯಿತು.

'ಅರೆ ! ಇಷ್ಟು ದೊಡ್ಡ ಹಾವನ್ನು ಇದು ತಿನ್ನುತ್ತದೆಯೇ?' ಎಂದು ಕೇಳಿದೆ. 'ಅಲ್ನೋಡಿ ಸರ್, ಇದು ಹುಡುಕಿದ ಹಾವನ್ನು ಕಿತ್ತುಕೊಳ್ಳಲು ಗರುಡ ಬರುತ್ತಿದೆ. ಫೋಟೊ ತೆಗೆಯಿರಿ' ಎಂದು ನಮ್ಮ ಗೈಡ್ ಸನಾತನ್ ಬೆಹ್ರಾ ಅವಸರಿಸಿದರು. ನಿಸರ್ಗದ ರಂಗಸ್ಥಳದಲ್ಲಿ ರೋಚಕ ನಾಟಕ ನಮ್ಮ ಮುಂದೆ ನಡೆದಿತ್ತು.

ಸಾಕಷ್ಟು ಸಮಯ ತಾಳ್ಮೆಯಿಂದ ತನ್ನ ಆಹಾರಕ್ಕಾಗಿ ಹುಡುಕಿ ತೆಗೆದಿದ್ದ ಹಾವು ತಪ್ಪಿಸಿಕೊಳ್ಳದಂತೆ ಐಬಿಸ್ ಹಕ್ಕಿ ಹಿಡಿದು ಸಾಯಿಸಬೇಕಾದ್ದು ಒಂದೆಡೆಯಾದರೆ, ಅದನ್ನು ಕಬಳಿಸಲು ಹೊಂಚು ಹಾಕಿ ಬಂದ ಗರುಡನಿಂದ ಅದನ್ನು ಉಳಿಸಿಕೊಳ್ಳುವ ಕೆಲಸ ಮತ್ತೊಂದೆಡೆ ಅದು ನಿರ್ವಹಿಸಬೇಕಿತ್ತು. ಗರುಡ ಹತ್ತಿರ ಬರುತ್ತಿದ್ದಂತೆ ಜೊಂಡಿನಲ್ಲಿ ಬಚ್ಚಿಡುತ್ತಾ, ಅದು ದೂರ ಹೋದೊಡನೆ ಹಾವನ್ನು ಕುಕ್ಕಿ ಕೊಲ್ಲುತ್ತಿತ್ತು. ಗರುಡನ ಆಕ್ರಮಣವನ್ನು ತಡೆಯುತ್ತಾ ಎದುರಿಸುತ್ತಾ ಹಾವನ್ನು ಅದು ಕಿತ್ತುಕೊಳ್ಳದಂತೆ ತಡೆಯುತ್ತಾ ಐಬಿಸ್ ತಾನೇ ಕಡೆಗೂ ಹಾವನ್ನು ನುಂಗಿತು.

